ಪಾರ್ಲರ್ ಬಳಿ ಹೋಗಿ ಆ ಹುಡುಗಿ ಬಂದಿದ್ದಳಾ ಎಂದು ತಿಳಿದುಕೋ... ಅವರ ಮನೆಯ ಬಳಿ ಅಥವಾ ಆ ಮನೆಯಿಂದ ಐಸ್‌ಕ್ರೀಮ್ ಪಾರ್ಲರ್‌ನ ದಾರಿಯಲ್ಲಿ ಸಿ.ಸಿ. ಟೀವಿ ಕ್ಯಾಮರಾ ಯಾರದ್ದಾದರೂ ಇದೆಯಾ... ಆ ಹುಡುಗಿ ಯಾವ ಶಾಲೆಗೆ ಹೋಗುತ್ತಿದ್ದಾಳೆ... ಅದನ್ನೂ ವಿಚಾರಿಸಿಕೊಂಡು ಬಾ...' ಎಂದು ಹೇಳಿದರು.

ಆಗಷ್ಟೇ ಪೊಲೀಸ್ ತರಬೇತಿ ಮುಗಿಸಿ ಪೂಜಾರಿ ಕೆಳಗೆ ತರಬೇತಿಗಾಗಿ ಬಂದಿದ್ದ ಜಗದೀಶ. ಈ ಪ್ರಪ್ರಥಮ ಕೇಸ್ ಬಗ್ಗೆ ಅವನಿಗೆ ಹೆಚ್ಚು ಉತ್ಸಾಹವಿತ್ತು.

ಬೆಳಗ್ಗೆ ಎಂಟು ಗಂಟೆಗೆ ಹೋದ ಜಗದೀಶ, ಸಾಯಂಕಾಲವಾದರೂ ಬರದಿದ್ದುದು ಮತ್ತು ರಿಪೋರ್ಟ್ ಕೂಡ ಮಾಡದೇ ಇದ್ದದ್ದು ಪೂಜಾರಿಗೆ ಅಸಹನೆ ತಂದಿತು. ಒಂದು ಸಣ್ಣ ಮಿಸ್ಸಿಂಗ್ ಕೇಸ್‌ನ ತನಿಖೆಗೆ ಅಷ್ಟೊಂದು ಸಮಯ ವ್ಯರ್ಥ ಮಾಡುವುದು ಅವನಿಗೆ ಸರಿ ಎನಿಸಲಿಲ್ಲ. ಅಲ್ಲದೇ ಏನಾಯಿತೆಂದು ಫೋನ್‌ನಲ್ಲಿ ಕೂಡಾ ರಿಪೋರ್ಟ್ ಮಾಡಿರಲಿಲ್ಲ... ಎರಡೂ ವಿಚಾರ ಸರಿಯಾಗಿ ತಿಳಿಹೇಳಬೇಕು ಎಂದುಕೊಳ್ಳುವಷ್ಟರಲ್ಲಿ ಜಗದೀಶ ಒಳಬಂದ.

'ಸರ್, ಮೊದಲನೆಯದಾಗಿ ನಿಮಗೆ ಫೋನ್ ಮಾಡಿ ರಿಪೋರ್ಟ್ ಮಾಡದೇ ಇದ್ದಿದ್ದಕ್ಕೆ ಕ್ಷಮಿಸಿ. ತನಿಖೆ ಮಾಡುವಾಗ ಕೆಲ ವಿಚಾರಗಳು ಮುಖ್ಯ ಎನಿಸಿದವು. ಹಾಗಾಗಿ ಅದರ ಬಗ್ಗೆ ಸ್ವಲ್ಪ ಆಳವಾಗಿ ತಿಳಿದುಕೊಳ್ಳಲು ಸಮಯ ಹಿಡಿಯಿತು' ಎಂದ.

ಅವನ ಮಾತುಗಳು ಪೂಜಾರಿ ಮೇಲೆ ಹೆಚ್ಚು ಪ್ರಭಾವ ಬೀರಲಿಲ್ಲ. ಅವನ ಪ್ರಕಾರ ಇದೊಂದು ಸಣ್ಣ ಪ್ರಕರಣ. ಪೂಜಾರಿಯ ಮುಂದಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಜಗದೀಶ ಹೇಳಿದ, 'ಸರ್, ಸದಾನಂದ ಅವರು ಆ ಮನೆಗೆ ಬಂದು ಕೇವಲ ನಾಲ್ಕು ದಿನಗಳಾಗಿವೆ. ಅವರ ಮನೆಯ ಅಕ್ಕಪಕ್ಕದ ಯಾರೂ ಆ ಹುಡುಗಿಯನ್ನು ಇಲ್ಲಿಯತನಕ ನೋಡೇ ಇಲ್ಲ. ನಿನ್ನೆ ಆ ಹುಡುಗಿ ಕಳೆದು ಹೋಗಿದ್ದಾಳೆ, ಹುಡುಕಲು ಸಹಾಯ ಮಾಡಿ ಅಂದಾಗ ಅವರಿಗೆ ಗೊತ್ತಾಗಿದೆ.'

'ಅದರಲ್ಲಿ ಅಂಥಾ ವಿಶೇಷವೇನಿದೆ? ಹೊಸ ಮನೆಗೆ ಬಂದಿದ್ದಾರೆ. ಅಕ್ಕಪಕ್ಕದವರ ಪರಿಚಯ ಆಗಲು ಸ್ವಲ್ಪ ಸಮಯ ಹಿಡಿಯುತ್ತದೆ... ಆ ಐಸ್‌ಕ್ರೀಮ್ ಪಾರ್ಲರ್ ಹತ್ತಿರ ಹೋಗಿದ್ದೆಯಾ?'

'ಸರ್, ಸದಾನಂದ ಇರುವ ಸ್ಥಳ ಒಂದು ಕೆಳ ಮಧ್ಯಮ ವರ್ಗದವರು ಇರುವ ಸ್ಥಳ. ಆ ಪಾರ್ಲರ್ ಸದಾನಂದನ ಮನೆಯಿಂದ ಸುಮಾರು ಒಂದು ಕಿ.ಮೀ ದೂರದಲ್ಲಿದೆ. ಅಷ್ಟು ದೂರ ಇರುವ ಸ್ಥಳಕ್ಕೆ, ಅದೂ ಹೊಸ ಜಾಗದಲ್ಲಿ ಹದಿನಾರು ವರ್ಷದ ಹುಡುಗಿಯನ್ನು ರಾತ್ರಿ ಒಬ್ಬಳನ್ನೇ ಕಳುಹಿಸಿದ್ದಾರೆ ಎನ್ನುವುದು ಸ್ವಲ್ಪ ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ...'

ತರ್ಕಬದ್ಧವಾದ ಮಾತು ಎಂದು ಅದನ್ನು ಟಿಪ್ಪಣಿ ಮಾಡಿಕೊಳ್ಳತೊಡಗಿದ.

'ಅದರ ಬಗ್ಗೆ ವಿಚಾರಿಸಿದೆ, ರಾತ್ರಿ ಸದಾನಂದನಿಗೆ ಗ್ಯಾಸ್ಟ್ರಿಕ್‌ನಿಂದ ಬಹಳ ತೊಂದರೆ ಆಗುತ್ತಿತ್ತಂತೆ. ಎಷ್ಟೇ ಬೇಡ ಅಂದರೂ ಆ ಹುಡುಗಿ ಅವನ ಪರ್ಸ್‌ನಿಂದ ನೂರು ರೂಪಾಯಿ ತೆಗೆದುಕೊಂಡು ಹೋದಳು ಅಂತಾ ಹೇಳಿದರು. ಐಸ್‌ಕ್ರೀಮ್ ಪಾರ್ಲರ್‌ನ ಸಿ.ಸಿ ಟೀವಿಯಲ್ಲಿ ಗಮನಿಸಿದರೆ ಹುಡುಗಿ ಅಲ್ಲಿ ಬರಲೇ ಇಲ್ಲ!'

'ಅಂದರೆ ಮಾರ್ಗ ಮಧ್ಯೆಯೇ ಕಾಣೆ ಆಗಿದ್ದಾಳೆ...' ಎಂದ ಪೂಜಾರಿ.

'ಸರ್, ಕಿಡ್ನಾಪ್ ಆಗಿರುವ ಸಾಧ್ಯತೆ?...' ಅದಕ್ಕಾವ ಉತ್ತರವನ್ನೂ ಹೇಳದ ಪೂಜಾರಿ, 'ಸದಾನಂದನ ಮನೆ ಮತ್ತು ಆ ಪಾರ್ಲರ್ ನಡುವೆ ಯಾವ ಯಾವ ಜಾಗದಿಂದ ಆ ಹುಡುಗಿ ಯಾರ ಕಣ್ಣಿಗೂ ಕಾಣದಂತೆ ಮಾಯವಾಗಬಹುದು ಅಥವಾ ನೀನು ಹೇಳಿದಂತೆ ಕಿಡ್ನಾಪ್ ಮಾಡಿದ್ದರೆ ಯಾವ ಸ್ಥಳದಿಂದ ಮಾಡಿರಬಹುದು ಎಂದು ಲೆಕ್ಕಾಚಾರ ಹಾಕಿ, ಅಲ್ಲಿಂದ ಅವರ